

# ಶಬ್ದ ಮಾಣಿಕ್ಯನಿಗೆ ಪದ್ಮಶ್ರೀ

■ ಕಾವೆಂಶ್ರೀ

ಕನ್ನಡ ಸಾರಸ್ವತ ಲೋಕದ ಶತಾಯುಷಿ ಜಿ.ವೆಂಕಟಸುಬ್ಬಯ್ಯ ಅವರು ಕನ್ನಡದ ಆಸ್ತಿ. ಕನ್ನಡ ಶಬ್ದ ದ್ರವ್ಯದ ದೃಷ್ಟಾರ. ಕನ್ನಡವೇ ಉಸಿರು. ಶಬ್ದ ಮಾಣಿಕ್ಯದ ಸಂಶೋಧನೆ, ಹುಡುಕಾಟವೇ ಜೀವನದ ಕಾಯಕ. ಪ್ರಜಾವಾಣಿಯ 'ಇಗೋ ಕನ್ನಡ' ಅಂಕಣದ ಮೂಲಕ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದವರು. ಕನ್ನಡದ ನಡೆದಾಡುವ ಶಬ್ದಕೋಶ. ಇವರಿಗೀಗ 103ರ ಇಳಿವಯಸ್ಸು. ಕನ್ನಡ ಸಾಹಿತ್ಯ ಪರಿಷತ್‌ಗಿಂತಲೂ ಒಂದು ವರ್ಷ ದೊಡ್ಡವರು. ಗದುಗಿನ ಕಲಾಚೇತನ ಸಾಂಸ್ಕೃತಿಕ ಅಕಾಡಮಿಯು ನೀಡಿರುವ 'ಅಂಕಣಶ್ರೀ' ಪ್ರಶಸ್ತಿಯಿಂದ ಹಿಡಿದು ದೇಶದ ಹೆಮ್ಮೆಯ 'ಪದ್ಮಶ್ರೀ' ಗೌರವಕ್ಕೆ ಭಾಜನರಾಗಿರುವ ನಿಘಂಟುತಜ್ಞ, ವಿದ್ವಾಂಸ, ಸಂಶೋಧಕ. ಈ ಬಹುಮುಖಿ 77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನುಡಿತೇರಿನ ಪೀಠವನ್ನೇರಿದ ಹೆಮ್ಮೆಯನ್ನೂ ಹೊಂದಿದ್ದಾರೆ.

'ಇಗೋ ಕನ್ನಡ' ಎನ್ನುವ ಸಾಪ್ತಾಹಿಕ ಅಂಕಣವನ್ನು ಸತತ ಹತ್ತು ವರ್ಷಗಳಿಗೂ ಹೆಚ್ಚು ಕಾಲ ಬರೆದ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಕಾರ್ಯವ್ಯಾಪ್ತಿ ಬಹುದೊಡ್ಡದು. ಶಿಕ್ಷಣ, ಸಂಶೋಧನೆ, ಅನುವಾದ, ವಿಮರ್ಶೆ ಮತ್ತು ನಿಘಂಟುಗಳ ನಿರ್ಮಾಣ! ಸುಮಾರು 1973ರಿಂದ 1992ರವರೆಗೆ ಕನ್ನಡ–ಕನ್ನಡ ಬೃಹತ್ ಕೋಶದ ಪ್ರಧಾನ ಸಂಪಾದಕರಾಗಿ ಅವರು ಕೆಲಸ ನಿರ್ವಹಿಸಿದ್ದಾರೆ. 2000 ಪುಟಗಳ ನಿಘಂಟು ಸಿದ್ಧವಾಗಿದೆ. ಸಂಶೋಧನೆ, ವಿಮರ್ಶೆ, ಅನುವಾದ, ಗ್ರಂಥಸಂಪಾದನೆಯಲ್ಲಿ 65ಕ್ಕೂ ಹೆಚ್ಚು ಗ್ರಂಥ ರಚನೆ ಮಾಡಿದ್ದಾರೆ. 1939ರಿಂದ ಕನ್ನಡ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಬೋಧನಾ ವರ್ಗಗಳ ವಿಶೇಷ ಪ್ರಾಧ್ಯಾಪಕರಾಗಿ, ಸಂದರ್ಶಕರಾಗಿ, ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯದ ಅಕಾಡಮಿಕ್ ಕೌನ್ಸಿಲ್ ಸದಸ್ಯರಾಗಿ ಜೀವಿ ಅವರು ಸಲ್ಲಿಸಿದ ಸೇವೆ ಅನುಪಮ.

ಸಾಹಿತ್ಯ ಕ್ಷೇತ್ರದಲ್ಲೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ, ಕನ್ನಡ ನುಡಿಯ ಸಂಪಾದಕರಾಗಿ, ಕನ್ನಡ–ಕನ್ನಡ ವಿಶ್ವಕೋಶದ ಪ್ರಧಾನ ಸಂಪಾದಕರಾಗಿ, ಬಹುಭಾಷಾ ನಿಘಂಟಿನ ಸಲಹೆಗಾರರಾಗಿ, ತೆಲುಗು ಅಕಾಡಮಿಯ ಶಬ್ದಸಾಗರದ ಸಮಾಲೋಚನ ಸಮಿತಿಯ ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಾ ಬಂದಿದ್ದಾರೆ.

ಜೀವಿ ಅವರ ತಂದೆ ಗಂಜಾಂ ತಿಮ್ಮಣ್ಣಯ್ಯನವರು. ಅರಮನೆಯ ವಿದ್ವಾಂಸರಾಗಿದ್ದರಲ್ಲದೆ ಸಂಸ್ಕೃತ, ಕನ್ನಡಗಳಲ್ಲಿ ಪರಿಣಿತರು ಮತ್ತು ವೇದೋಪನಿಷತ್‌ಗಳಲ್ಲಿ ಪಾರಂಗತರು. 'ಪುರಾಣ ಕಥಾವಳಿ' ಮಾಸಪತ್ರಿಕೆಯನ್ನು ಸ್ಥಾಪಿಸಿ, ಅದರಲ್ಲಿ ಶಿವಮಹಾಪುರಾಣ, ವಿಷ್ಣುಪುರಾಣ ಮುಂತಾದ ಪುರಾಣಗಳನ್ನು ಅನುವಾದ ಮಾಡಿ ಪ್ರಕಟಿಸಿದರು. ರಘುವೀರ ಚರಿತ್ರೆ ಎಂಬ ನಾಟಕವನ್ನೂ ಅನುವಾದ ಮಾಡಿದ್ದರು. ಅಂತಹ ಮನೆತನದಲ್ಲಿ ಜೀವಿ ಅವರ ಜನನ.

103 ವರ್ಷ ದಾಟುತ್ತಿದ್ದರೂ ಅವರ ಶರೀರ, ಶಾರೀರ ಎರಡೂ ಗಟ್ಟಿಮುಟ್ಟಾಗಿಯೇ ಇದೆ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ 1937ರಲ್ಲಿ ಕನ್ನಡ ಎಂ.ಎ. ಪದವಿಯಲ್ಲಿ ಪ್ರಥಮ ಸ್ಥಾನ. ಸುವರ್ಣ ಪದಕ ಪಡೆದ ಬಳಿಕ ಬಿ.ಟಿ.ಪದವಿ ಗಳಿಸಿದರು. ಇಗೋ ಕನ್ನಡ ಭಾಗ 1 ಮತ್ತು 2, ಮುದ್ದಣ ಪದಪ್ರಯೋಗ ಕೋಶ, ಎರವಲು ಪದಕೋಶ ಮತ್ತು ಇತರರೊಡನೆ ಸೇರಿ ಕನ್ನಡ–ಕನ್ನಡ ನಿಘಂಟು ರಚಿಸಿದ್ದಾರೆ. ಈಗಾಗಲೇ 16 ನಿಘಂಟು ಮತ್ತು ನಿಘಂಟು ಶಾಸ್ತ್ರ ಗ್ರಂಥಗಳು, 27 ಸಾಹಿತ್ಯ ವಿಮರ್ಶೆ, ಚರಿತ್ರೆಗಳು, 24 ಸಂಪಾದಿತ ಗ್ರಂಥಗಳು, 8 ಅನುವಾದ ಗ್ರಂಥಗಳು, 4 ಮಕ್ಕಳ ಪುಸ್ತಕಗಳು ಪ್ರಕಟಗೊಂಡಿವೆ. ಜೀವಿಯವರ ಕುರಿತು 'ಶಬ್ದಸಾಗರ'ವೆಂಬ ಅಭಿನಂದನ ಗ್ರಂಥವೂ ಬಿಡುಗಡೆಯಾಗಿದೆ.

ಪ್ರತಿನಿತ್ಯವೂ ವಾಯುವಿಹಾರ, ಹಿತಮಿತ ಆಹಾರ, ಮಾತು, ಮಧುರ ಭಾವನೆ, ಮುಗ್ಧ ಮನಸು, ಯಾವುದೇ ದುಶ್ಚಟಗಳಿಗೆ ಬಲಿಯಾಗದ ದೇಹ, ವಿನಯ, ನಮ್ರತೆ, ಸಮಯೋಚಿತ ಓದು–ಬರಹ, ಸಮಯಪಾಲನೆ, ಸರಿಯಾದ ನಿದ್ರೆ, ಎಲ್ಲರನ್ನೂ ಪ್ರೀತಿಯಿಂದ ಕಾಣುವ ದೊಡ್ಡ ಗುಣ– ಇವೆಲ್ಲವೂ ಅವರ ಶತಾಯುಷದ ಗುಟ್ಟು. ಮಡದಿ ನಿಧನರಾಗಿ 5 ತಿಂಗಳು ಕಳೆದಿವೆ. ಆದರೂ ಅದೇ ಶಿಸ್ತು, ದಿನನಿತ್ಯದ ಪರಿಪಾಠ, ಒಡನಾಟ, ಓದು ಬರಹಗಳೇ ಇವರಿಗೆ ಶಾಂತಸ್ಥಿತಿಯಲ್ಲಿ ಬದುಕಲು ಅನುವಾಗಿದೆ.

ಮಲಯಾಳಂ, ತೆಲುಗು, ತಮಿಳು ಕಥೆಗಳನ್ನೂ ಸಹ ಬರೆದಿದ್ದಾರೆ. ಜೀವಿ ಅವರ ಸಾಹಿತ್ಯ ಸಾಧನೆಯನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ, ಕರ್ನಾಟಕ ಸಾಹಿತ್ಯ ಅಕಾಡಮಿ, ಶಂಬಾ, ಸೇಡಿಯಾಪು, ಶಿವರಾಮ ಕಾರಂತ, ಕರ್ನಾಟಕ ಪತ್ರಿಕಾ ಅಕಾಡಮಿ, ಮುದ್ದಣ, ನಾಡೋಜ ಪ್ರಶಸ್ತಿಗಳು ಲಭಿಸಿವೆ. 1964–69ರ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆ ಇವರದ್ದು.

'ಪದ್ಮಶ್ರೀ' ಪ್ರಶಸ್ತಿ ಪ್ರಕಟವಾದ ಹಿನ್ನೆಲೆಯಲ್ಲಿ ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ:

★ *ಕನ್ನಡ ಭಾಷೆ ಸದ್ಯಕ್ಕೆ ಅತಂತ್ರ ಸ್ಥಿತಿ ಅನುಭವಿಸುತ್ತಿದೆ ಎನ್ನುತ್ತಿದ್ದಾರೆ, ಹೌದೆ?*